**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**
**ಸಿ.ಸಿ.ನಂ.231/2010**

**ಪಿ.ಡಬ್ಲ್ಯೂಃ 11**
**ಸಿ.ಡಬ್ಲ್ಯೂಃ 10**

| | |
|---|---|
| ಸಾಕ್ಷಿದಾರರ **ಹೆಸರು** | ಃ ಸೀತಾರಾಮ್ |
| ತಂದೆಯ **ಹೆಸರು** | ಃ ಮರಿಯಪ್ಪ |
| **ವಯಸ್ಸು** | ಃ **50 ವರ್ಷ** |
| **ಉದ್ಯೋಗ** | ಃ ವ್ಯವಸಾಯ |
| **ವಾಸಸ್ಥಳ** | ಃ ಬಾವಿಕೆರೆ |

**ದಿನಾಂಕಃ 23-12-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ನಾನು *2013* ನೇ ಸಾಲಿನಿಂದ ತಾಲ್ಲೂಕು ಪಂಚಾಯ್ತಿಯ ಸದಸ್ಯನಾಗಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. *7, 8* ವರ್ಷಗಳ ಹಿಂದೆ ಕೊಡಗು ಚಿಕ್ಕಮಗಳೂರು ಬ್ಯಾಂಕ್ ಎಂದು ಹೆಸರಿದ್ದು, ಈಗ ಕಾವೇರಿ ಗ್ರಾಮೀಣ ಬ್ಯಾಂಕ್ ಎಂದು ಬದಲಾಗಿರುತ್ತದೆ. ಸದರಿ ಬ್ಯಾಂಕಿನಲ್ಲಿ ಆರೋಪಿ *2013* ನೇ ಸಾಲಿನಲ್ಲಿ ಬಾವಿಕೆರೆ ಶಾಖೆಗೆ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆರೋಪಿ ಸ್ಥಳೀಯ ಜನರ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಸ್ಥಳೀಯರು ಬ್ಯಾಂಕಿನಲ್ಲಿ ಇಟ್ಟಿದ್ದ ಚಿನ್ನದ ಒಡವೆಗಳನ್ನು ನಕಲಿ ಒಡವೆಗಳನ್ನು ಟಿಜೋರಿಯಲ್ಲಿ ಇಟ್ಟಿದ್ದರು. *6, 7* ವರ್ಷಗಳ ಹಿಂದೆ ಬಾವಿಕೆರೆಯಲ್ಲಿ ನಾನು ನನ್ನ ಮನೆಯಿಂದ ಜಮೀನಿನ ಕಡೆಗೆ ಹೋಗುವಾಗ ಬ್ಯಾಂಕಿನ ಕ್ಯಾಷಿಯರ್ ಬಲರಾಮ ಎಂಬುವವರು ಬ್ಯಾಂಕಿನಲ್ಲಿ ಒಂದು ಪ್ರಕರಣ ಆಗಿದೆ, ಸ್ಥಳೀಯರಾಗಿರುವುದರಿಂದ ನೀವು ಬ್ಯಾಂಕಿಗೆ ಬನ್ನಿ, ಅಲ್ಲಿ ಸೀನಿಯರ್ ಮ್ಯಾನೇಜರ್ ಆದ ಸತ್ಯನಾರಾಯಣ ಚಿಕ್ಕಮಗಳೂರಿನಿಂದ ಬಂದಿದ್ದು, ಹಾಗೂ ಗಾಯತ್ರಿ ಎಂಬುವವರು ಹೊಸದಾಗಿ ಚಾರ್ಜ್ ತೆಗೆದುಕೊಳ್ಳಲು ಆರೋಪಿಯ ಬದಲು ಕರ್ತವ್ಯ ನಿರ್ವಹಿಸಲು ಬಂದಿರುತ್ತಾರೆಂದು ತಿಳಿಸಿರುತ್ತಾರೆ. ನನ್ನನ್ನು ಬ್ಯಾಂಕಿಗೆ ಕರೆದುಕೊಂಡು ಹೋದರು. ಸುಮಾರು *11* ರಿಂದ *2* ಗಂಟೆಯ ಒಳಗೆ ನಾನು ಬ್ಯಾಂಕಿಗೆ ಹೋದಾಗ ಬ್ಯಾಂಕ್‌ನ

ಅಪ್ರೈಸರ್ ರವರನ್ನು ಕರೆಸಿದ್ದರು. ನನ್ನ ಜೊತೆಗೆ ಇನ್ನೂ ಕೆಲವು ಗ್ರಾಮಸ್ಥರು ಹಾಜರಿದ್ದರು. ಆ ಸಮಯದಲ್ಲಿ ನ್ಯಾಯಾಲಯದಲ್ಲಿರುವ ಆರೋಪಿ ಜೈಲಿನಲ್ಲಿದ್ದರಿಂದ ಆರೋಪಿಯ ಮಗ ಸದರಿ ಸಮಯದಲ್ಲಿ ಹಾಜರಿದ್ದರು. ನಮ್ಮ ಸಮಕ್ಷಮ ಬ್ಯಾಂಕಿನಲ್ಲಿದ್ದ ಎಲ್ಲಾ ಒಡವೆಗಳನ್ನು ಪರಿಶೀಲಿಸಿದಾಗ ಬ್ಯಾಂಕಿನ ಅಪ್ರೈಸರ್ ಎಲ್ಲಾ ಒಡವೆಗಳನ್ನು ಪರಿಶೀಲನೆ ಮಾಡಿ ನಕಲಿ ಒಡವೆಗಳು ಎಂದು ತಿಳಿಸಿರುತ್ತಾರೆ. ಅಪ್ರೈಸರ್ ರವರು ಬ್ಯಾಂಕ್ ನಲ್ಲಿ ಒಡವೆಗಳನ್ನು ಇಟ್ಟುಕೊಳ್ಳುವ ಸಮಯದಲ್ಲಿ ಅವುಗಳನ್ನು ಪರಿಶೀಲನೆ ಮಾಡಿ ಸಹಿ ಹಾಕಿರುತ್ತಾರೆ. ಸದರಿ ಅಪ್ರೈಸರ್ ರವರು ತಮ್ಮ ಸಹಿಯನ್ನೂ ಸಹ ನಕಲಿ ಸಹಿಗಳೆಂದು ತಮ್ಮ ಸಹಿ ಅಲ್ಲವೆಂದು ತಿಳಿಸಿರುತ್ತಾರೆ. ಆರೋಪಿ ಸ್ಥಳೀಯ ಕೆಲವು ರೈತರ ಹತ್ತಿರ ನಾನು ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಳ್ಳಲು ಬರುವುದಿಲ್ಲ, ನನ್ನ ಹತ್ತಿರ ಒಡವೆ ಇರುತ್ತವೆ, ಅವುಗಳನ್ನು ನಿಮ್ಮ ಹೆಸರಿನಲ್ಲಿ ಇಟ್ಟು ಸಾಲ ತೆಗೆದುಕೊಂಡಿರುತ್ತಾರೆಂದು ಕೆಲವು ರೈತರು ಹಾಗೂ ಕೆಲವು ರೈತರು ಸಾಲದ ಅರ್ಜಿಯ ಮೇಲಿರುವ ಸಹಿಗಳು ತಮ್ಮದಲ್ಲವೆಂದು ಹೇಳಿರುತ್ತಾರೆ.

ಪರಿಶೀಲನೆಯ ಸಮಯದಲ್ಲಿ ಬ್ಯಾಂಕ್ ನವರು ವರದಿ ತಯಾರಿಸಿದ್ದು, ಸದರಿ ವರದಿಗೆ ನಾನು ಸಹಿ ಮಾಡಿರುತ್ತೇನೆ. ಸದರಿ ವರದಿಯನ್ನು ಈಗಾಗಲೇ ನಿಪಿ-*20* ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-*20*(ಸಿ) ಎಂದು ಗುರುತಿಸಲಾಯ್ತು. ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನಿಪಿ-*10, 11* ರಲ್ಲಿ ಸಾಕ್ಷಿ ಅಪ್ರೈಸರ್ ಹಾಗೂ ಪರಿಶೀಲಿಸಿದ ನಕಲಿ ಒಡವೆಗಳನ್ನು ನೋಡಿ ಗುರುತಿಸುತ್ತಾರೆ.

***ಪಾಟೀಸವಾಲು : ಆರೋಪಿ ಪರ*** ಶ್ರೀ ಎಂ ಕೆ ಟಿ ***ವಕೀಲರಿಂದ.***

ನಾನು ಮಾಜಿ ತಾಲ್ಲೂಕು ಪಂಚಾಯ್ತಿ ಸದಸ್ಯನಾಗಿರುತ್ತೇನೆ. ನಾನು ಸದರಿ ಬ್ಯಾಂಕಿನ ಖಾತೆದಾರನಾಗಿರುತ್ತೇನೆ. ನಾನು ಪೋಲೀಸರಿಗೆ ಹೇಳಿಕೆ ನೀಡಿದ ದಿನಾಂಕವನ್ನು ನಿಖರವಾಗಿ ಹೇಳಲಾಗುವುದಿಲ್ಲ. ಬ್ಯಾಂಕಿನಲ್ಲಿ ಬಂಗಾರದ ಆಭರಣಗಳನ್ನು ಅಡವಿಟ್ಟು ಸಾಲ ಪಡೆದವರ ಪೈಕಿ ಗಿಡ್ಡಪ್ಪ ಮತ್ತು ಕುಮಾರ್ ಎಂಬುವವರ ಹೆಸರು ನೆನಪಿದ್ದು, ಉಳಿದವರ ಹೆಸರನ್ನು ನನಗೆ ನೆನಪಿಲ್ಲ. ಗಿಡ್ಡಪ್ಪ ಮತ್ತು ಕುಮಾರ್ ಎಷ್ಟು ಬಂಗಾರದ ಅಭರಣವನ್ನು ಅಡವಿಟ್ಟು ಎಷ್ಟು ಸಾಲವನ್ನು ಪಡೆದಿದ್ದಾರೆಂದು ನನಗೆ ಗೊತ್ತಿಲ್ಲ. ಬ್ಯಾಂಕಿನಲ್ಲಿ ಯಾವ್ಯಾವ ದಾಖಲೆಗಳನ್ನು ನೋಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಬ್ಯಾಂಕಿನಲ್ಲಿ ಬಂಗಾರ ಅಡವಿಟ್ಟು ಸಾಲ ನೀಡುವಾಗ ಇಡುವ ಎಲ್ಲಾ ಪುಸ್ತಕಗಳನ್ನು ನಾನು ನೋಡಿದ್ದೇನೆ.

ಬಂಗಾರದ ಆಭರಣಗಳನ್ನು ಅಡವಿಟ್ಟು ಸಾಲ ಪಡೆಯುವಾಗ ಯಾವ್ಯಾವ ದಾಖಲೆಗಳಲ್ಲಿ ಸಹಿ ಪಡೆಯುತ್ತಾರೆಂಬ ಬಗ್ಗೆ ನನಗೆ ಗೊತ್ತಿಲ್ಲ. ಬ್ಯಾಂಕಿನಲ್ಲಿ ರೆಗ್ಯುಲರ್ ಆಗಿ ಆಭರಣಗಳನ್ನು ಪರಿಶೀಲನೆ ಮಾಡುವ ಅಪ್ರೈಸರ್ ಯಾರು ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ, ಆದರೆ ಆ ದಿನ ನೋಡಿದ ವ್ಯಕ್ತಿಯೇ ರೆಗ್ಯುಲರ್ ಆಗಿ ಪರಿಶೀಲನೆ ಮಾಡುತ್ತೇನೆಂದು ನುಡಿದಿರುತ್ತಾರೆಂದು ನುಡಿಯುತ್ತಾರೆ. ನಾನು ಹಾಜರಾದ ದಿನ ಆಭರಣಗಳನ್ನು ಪರೀಕ್ಷೆ ಮಾಡಿದ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ನಾನು ಯಶೋದಮ್ಮ ಎಂಬುವವರಿಗೆ ಸಾಲ ಪಡೆಯುವಾಗ ಜಾಮೀನು ಹಾಕಿರುವುದನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿಗಳಿಗೆ ಸಾಲ ಪಡೆಯುವುದಕ್ಕೆ ಶಿಫಾರಸ್ಸು ಮಾಡಿರುವುದಿಲ್ಲ.

ಆರೋಪಿ ನಕಲಿ ಆಭರಣಗಳನ್ನು ಬಳಸಿ ಬ್ಯಾಂಕಿನಲ್ಲಿ ಸಾಲ ಪಡೆದಿರುವ ಬಗ್ಗೆ ಕುಮಾರ್ ಎಂಬುವವರು ವಿಚಾರ ತಿಳಿಸಿರುತ್ತಾರೆ. ಆರೋಪಿ ನನಗೆ ವೈಯಕ್ತಿಕ ಪರಿಚಯ ಇಲ್ಲ ಎಂದರೆ ಸರಿ. ನಾನು ಹಾಜರಿದ್ದ ಕಾಲಕ್ಕೆ ಅಭರಣಗಳು ನಕಲಿ ಎಂದು ಹಾಗೂ ದಾಖಲೆಗಳು ನಕಲಿ ಎಂದು ಅಪ್ರೈಸರ್ ಹಾಗೂ ಬ್ಯಾಂಕಿನ ಅಧಿಕಾರಿಗಳು ತಿಳಿಸಿರುತ್ತಾರೆ. ನನ್ನ ಸಮಕ್ಷಮದಲ್ಲಿ ಬಂಗಾರ ಇರುವ ಎಷ್ಟು ಚೀಲಗಳನ್ನು ಪರಿಶೀಲಿಸಿದರು ಎಂಬ ಬಗ್ಗೆ ನಿಖರವಾಗಿ ಹೇಳಲಾಗುವುದಿಲ್ಲ. ಆಭರಣಗಳನ್ನು ಪರಿಶೀಲನೆ ಮಾಡುವಾಗ ನಕಲಿ ಹಾಗೂ ಅಸಲಿಗಳನ್ನು ಬೇರೆಯಾಗಿ ಬೇರ್ಪಡಿಸಿರುತ್ತಾರೆ. ಸುಮಾರು ***8*** ರಿಂದ ***10*** ಚೀಲಗಳನ್ನು ನಕಲಿ ಬಂಗಾರ ಇರುವ ಚೀಲಗಳೆಂದು ಬೇರ್ಪಡಿಸಿ ಇಟ್ಟರು. ಉಳಿದ ಚೀಲಗಳಲ್ಲಿ ಅಸಲಿ ಬಂಗಾರ ಇತ್ತು ಎಂದು ತಿಳಿಸಿದರು.

ಆರೋಪಿ ಮಾಡಿರುವ ಸಹಿಯನ್ನು ನಾನು ನೋಡಿರುವುದಿಲ್ಲ. ಬ್ಯಾಂಕಿನಲ್ಲಿ ಸುಮಾರು ***4, 5*** ಜನ ಸಿಬ್ಬಂದಿಗಳು ಇದ್ದರು. ಬ್ಯಾಂಕಿನಲ್ಲಿ ಅವ್ಯವಹಾರ ನಡೆದಿದೆ ಎಂದು ಗುರುನಾಥ ಹಾಗೂ ಗಾಯತ್ರಿ ಎಂಬುವ ಮ್ಯಾನೇಜರ್ ತಿಳಿಸಿರುತ್ತಾರೆಂದರೆ ಸರಿ. ಬ್ಯಾಂಕಿನ ಸಿಬ್ಬಂದಿ ಬಲರಾಮ ಅವರು ಮುಖ ಪರಿಚಯವಿದ್ದು, ವೈಯಕ್ತಿಕ ಪರಿಚಯವಿರುವುದಿಲ್ಲ. ನಾನು ತಾಲ್ಲೂಕು ಪಂಚಾಯ್ತಿ ಸದಸ್ಯನಾಗಿರುವುದರಿಂದ ಸಾಮಾನ್ಯವಾಗಿ ಇಲಾಖಾ ಅಧಿಕಾರಿಗಳನ್ನು ಹಾಗೂ ಬ್ಯಾಂಕ್ ಅಧಿಕಾರಿಗಳನ್ನು ಪರಿಚಯ ಮಾಡಿಕೊಂಡಿರುತ್ತೇನೆಂದರೆ ಸಾಕ್ಷಿಯು ಬ್ಯಾಂಕಿನ ಅಧಿಕಾರಿಗಳ ಪರಿಚಯ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ಬ್ಯಾಂಕ್‌ನ ಲಾಕರ್‌ನ ಕೀಯನ್ನು ಮೊದಲು ಯಾರು ತೆಗೆದರೆಂದು ನಾನು ಗಮನಿಸಿಲ್ಲ. ಲಾಕರ್‌ಗೆ ಎಷ್ಟು ಕೀಗಳು ಇದ್ದವೆಂದು ನಾನು ನೋಡಿಲ್ಲ. ಬ್ಯಾಂಕಿನಲ್ಲಿ

ಎಷ್ಟು ಕೊಠಡಿಗಳು ಇವೆ ಎಂಬ ಪ್ರಶ್ನೆಗೆ ಸಾಕ್ಷಿಯು ವಾಣಿಜ್ಯ ಮಳಿಗೆಯನ್ನು ಬ್ಯಾಂಕಿನ ಉಪಯೋಗಕ್ಕೆ ಬಳಸಿಕೊಂಡಿದ್ದು, ಅದನ್ನು ಐದು ಕೋಣೆಗಳ ಭಾಗಗಳಾಗಿ ಮಾಡಿರುತ್ತಾರೆ. ನಾನು ಬ್ಯಾಂಕನ್ನು ನೋಡಿರುವುದಿಲ್ಲ ಹಾಗೂ ಮಹಜರ್ ಸಮಯದಲ್ಲಿ ನಾನು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಆ ದಿನ ಮಾಡಿದ ನಡವಳಿಕೆಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮ್ಯಾನೇಜರ್ ಪ್ರತಿಗೆ ಬ್ಯಾಂಕ್ ನಲ್ಲಿ ಸಹಿ ಮಾಡಿದ್ದು, ಪೋಲೀಸರ ಪ್ರತಿಗೆ ಬ್ಯಾಂಕ್ ಆವರಣದ ಒಳಗೆ ಅಥವಾ ಹೊರಗೆ ಎಲ್ಲಿ ಸಹಿ ಮಾಡಿದ್ದೇನೆಂದು ನೆನಪಿಲ್ಲ. ನನಗೆ ಯಾವುದೇ ವಿಚಾರ ಗೊತ್ತಿರದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರುವಿಚಾರಣೆ</u>ಃ ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***